ರೀಲ್ ಮಾಡೆಲ್



> ‘ನಮ್ಮ ಭಾಗದವರು ಮೈಸೂರು ಭಾಗದತ್ತ ಬಂದರೆ, ಉತ್ತರ ಕರ್ನಾಟಕ ಶೈಲಿಯ ಕನ್ನಡವನ್ನು ಮಾತನಾಡಲು ಹಿಂಜರಿಯುತ್ತಾರೆ. ಆ ಸೀಮೆಯ ಭಾಷೆ ಮಾತನಾಡಿದರೆ, ಯಾರು ಒರಟು ಎಂದುಕೊಳ್ಳುತ್ತಾರೊ, ಏನೆಂದುಕೊಳ್ಳುತ್ತಾರೊ ಅಂತೆಲ್ಲ ಯೋಚಿಸುತ್ತಾರೆ ಅದನ್ನು ಬದಲಾಯಿಸಬೇಕು’ ಎನ್ನುವುದು ಪವನ್ ಆಸೆ.

# ನಿಮ್ಮ ಕಡೆ ಏನಂತಾರೆ?

ವಾಂಡ್

ಅಡ್ಡಿ ಇಲ್ಲ

ಯಾಂಬಲ್

ವಜ್ಜಿ ಐತಿ

■ ಸುಕೃತ ಎಸ್.

ನಿಮ್ಮ ಕಡೆ ಇರುವೆಗೆ ಏನಂತಾರೆ? ಸೊಳ್ಳೆಗೆ? ನೀನು ಸೋಂಬೇರಿ ಅಂತ ನಾನು ನಿನಗೆ ಹೇಳಬೇಕು. ನಿಮ್ಮ ಕಡೆ ಹೇಗೆ ಹೇಳ್ತಾರೆ? ಏನೋಪಾ ನನಗೆ ಗೊತ್ತಿಲ್ಲ... ಹೇಯ್ ಇದನ್ನೂ ನಮ್ಮ ಕಡೆ ಬೇರೆ ರೀತಿನೇ ಹೇಳ್ತಾರೆ...

– ಪ್ರತೀ 10 ಕಿ.ಮಿಗೆ ಊಟದ ಸಂಸ್ಕೃತಿ ಬದಲಾಗುತ್ತದೆ. ಅಂತೆಯೇ ಭಾಷೆ ಕೂಡ. ಪದಗಳ ಬಳಕೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿ. ಕೆಲವೊಮ್ಮೆ ಅಂತೂ ಒಂದೇ ಪದಗಳು ಬೇರೆ ಬೇರೆ ಭಾಗದಲ್ಲಿ ಇನ್ನೇನೋ ಬೇರೆಯದೇ ಅರ್ಥ ಕೊಡುತ್ತದೆ. ಅದೇ ಭಾಷೆಯ ಸೊಗಡು ಅಲ್ಲವೇ.

ಪದ– ಅದನ್ನು ಬಳಸುವ ಸಂದರ್ಭ, ಅದಕ್ಕಿರುವ ಧ್ವನಿ, ಅದು ಹೊರಡಿಸುವ ಅರ್ಥ, ಅನರ್ಥ... ಹೀಗೆ ಭಾಷೆಗಿರುವ ಇಂಥ ವೈಶಿಷ್ಟ್ಯವನ್ನು ಪವನ್ ಕೆ. ಪವಾರ್ ಅವರು ತಿಳಿಹಾಸ್ಯದ ಮೂಲಕ ಜನರ ಮುಂದಿಡುವ ಕೆಲಸ ಮಾಡುತ್ತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ (ಪವನ್ ಅವರ ಖಾತೆ: **pkp3232**) ರೀಲ್ಸ್ ಮೂಲಕ ಭಾಷೆಯ ಬಗೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತಿದ್ದಾರೆ. ಆರೇ ತಿಂಗಳ ಹಿಂದೆ ಆರಂಭಿಸಿದ ಈ ಕಾರ್ಯಕ್ಕೆ ಪವನ್ ಅವರಿಗೆ ಅನೇಕರು ಬೆಂಬಲಿಸಿದ್ದಾರೆ. ಅವರ ಇತ್ತೀಚಿನ ಕೆಲವು ರೀಲ್ಸ್‌ಗಳನ್ನು ಈವರೆಗೆ 19 ಲಕ್ಷ ಮಂದಿ ವೀಕ್ಷಿಸಿದ್ದಾರೆ.

ಬನ್ನಿ, ಅವರ ಮಾತಲ್ಲೇ ಕೇಳೋಣ: ನಾನು ವಿಜಯಪುರದವನು. ಕೊಡಗಿನಲ್ಲಿ ಶಾಲೆ ಕಲಿತೆ. ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಮಾಡಿದೆ. ಈ ಎಲ್ಲ ಕಡೆಗಳಲ್ಲಿ ಹಾಸ್ಟೆಲ್‌ನಲ್ಲಿ ಉತ್ತರ ಕರ್ನಾಟಕದವರೂ ಸೇರಿ ರಾಜ್ಯದ ಹಲವು ಭಾಗಗಳಿಂದ ವಿದ್ಯಾರ್ಥಿಗಳಿದ್ದರು. ಹಾಗಾಗಿ, ಭಾಷೆಯ ವೈವಿಧ್ಯದ ಕುರಿತು ನನಗೆ ಪರಿಚಯವಾಯಿತು. ಬೈಗುಳ ಇಲ್ಲದೆ ಉತ್ತರ ಕರ್ನಾಟಕದ ಭಾಷೆ ಪೂರ್ಣ ಆಗುವುದಿಲ್ಲ, ಅವರದ್ದು ಒರಟು ಭಾಷೆ ಅಂತೆಲ್ಲ ಒಂದು ಸಾಮಾನ್ಯ ಅಭಿಪ್ರಾಯ ಇದೆ. ನಮ್ಮ ಭಾಷೆ ಒರಟು ಅಲ್ಲ. ಆಯಾ ಪ್ರದೇಶಕ್ಕೆ ಆಯಾ ಭಾಷೆಗೆ ಒಂದೊಂದು ಸೊಗಡು, ವೈಶಿಷ್ಟ್ಯ ಇದೆಯಷ್ಟೆ. ಜನರಿಗೆ ಇದನ್ನು ಸ್ಪಷ್ಟಪಡಿಸುವುದು ನನ್ನ ಮೂಲ ಉದ್ದೇಶ. ತಿಳಿಹಾಸ್ಯದ ಮೂಲಕವೇ ಇದನ್ನೆಲ್ಲಾ ಹೇಳಲು ಹೊರಟಿದ್ದು ಕೂಡ ಇದೇ ಕಾರಣಕ್ಕೆ. ಭಾಷೆ ಒರಟು ಅಲ್ಲ, ಹಾಸ್ಯವನ್ನೂ ಮಾಡಬಹುದು ಎನ್ನುವುದನ್ನು ತೋರಿಸಲು. ಜೊತೆಗೆ, ಹಾಸ್ಯ ಜನರಿಗೆ ಬಹಳ ಬೇಗ ಇಷ್ಟವಾಗುತ್ತದೆ. ಹೆಚ್ಚು ಹೆಚ್ಚು ಜನರನ್ನು ತಲುಪಬಹುದು ಎನ್ನುವ ಕಾರಣವೂ ಇತ್ತು.

ಯಾವುದೋ ಒಂದು ಪದ, ಅದನ್ನು ಬೆಳಗಾವಿಯಲ್ಲಿ, ಬೀದರ್‌ನಲ್ಲಿ, ಹುಬ್ಬಳ್ಳಿಯಲ್ಲಿ, ವಿಜಯಪುರದಲ್ಲಿ ಹೀಗೆ ಉತ್ತರ ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಏನೆನ್ನುತ್ತಾರೆ ಎಂಬುದನ್ನು ಮೊದಮೊದಲು ರೀಲ್ಸ್ ಮಾಡುತ್ತಿದ್ದೆ. ಈಗ, ಸ್ವಲ್ಪ ವಿವರಣೆಯನ್ನೂ ನೀಡುತ್ತಿದ್ದೇನೆ. ಯಾವ ಸಂದರ್ಭದಲ್ಲಿ ಈ ಪದವನ್ನು ಬಳಸಲಾಗುತ್ತದೆ, ಹೇಗೆ ಉಚ್ಚಾರ ಮಾಡುತ್ತಾರೆ ಅಂತೆಲ್ಲಾ ವಿವರಿಸುತ್ತಿದ್ದೇನೆ. ಇಂಥ ಪದಗಳ ಬಗ್ಗೆ ರೀಲ್ಸ್ ಮಾಡಿ ಅಂತ ಜನರೇ ಮೆಸೇಜ್ ಮಾಡಿ ತಿಳಿಸುತ್ತಾರೆ. ತಮ್ಮ ತಮ್ಮ ಭಾಗದ ಪದಗಳನ್ನು ಅವರೇ ಹೇಳುತ್ತಾರೆ. ಯಾವ ಪದಗಳ ಮೇಲೆ ರೀಲ್ಸ್ ಮಾಡಲಿ ಅಂತ ನಾನೇ ಕೆಲವೊಮ್ಮೆ ಪೋಲಿಂಗ್ ಮಾಡುತ್ತೇನೆ. ಹೀಗೆ ನನಗೆ ಕಂಟೆಂಟ್ ಸೃಷ್ಟಿಯಾಗುತ್ತದೆ. ಪ್ರಾರಂಭದಲ್ಲಿ ನಾನೇ ನನಗೆ ಗೊತ್ತಿದ್ದಿದ್ದನ್ನು ಮಾಡಿದ್ದೇನೆ. 6 ತಿಂಗಳಲ್ಲಿ 227 ಪೋಸ್ಟ್ ಮಾಡಿದ್ದೇನೆ. ಅದರಲ್ಲಿ 100 ರೀಲ್ಸ್ ಭಾಷೆಯ ಬಗ್ಗೆಯೇ ಇದೆ.

### ಸ್ಟ್ಯಾಂಡ್‌ಅಪ್ ಕಾಮಿಡಿ

ಇಲ್ಲಿ ಎಲ್ಲವೂ ನಂದೇ ಶ್ರಮ. ನಾನೇ ಸ್ಕ್ರಿಪ್ಟ್ ಬರೆಯುತ್ತೇನೆ. ನಾನೇ ವಿಡಿಯೊ ಮಾಡಿ, ಎಡಿಟ್ ಮಾಡುತ್ತೇನೆ. ಭವಿಷ್ಯದಲ್ಲಿ ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುವ ಆಸೆ ಇದೆ. ಇದಕ್ಕೂ ತಯಾರಿ ನಡೆಸಿದ್ದೇನೆ. ಇದರ ಜೊತೆಯಲ್ಲಿಯೇ ರಾಜ್ಯದ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ, ಅಲ್ಲಿನ ಭಾಷೆ ಕುರಿತು ಜನರನ್ನು ಮಾತನಾಡಿಸುತ್ತಾ, ನನ್ನ ಅನುಭವಗಳನ್ನು ಹಂಚಿಕೊಳ್ಳುತ್ತಾ, ನಾನೂ ಎಲ್ಲ ಭಾಷೆಗಳನ್ನು ಕಲಿಯುತ್ತಾ, ಆಯಾ ಊರಿನ ತಿಳಿದವರನ್ನು, ಜಾನಪದ ಕಲಾವಿದರನ್ನು ಮಾತನಾಡಿಸಿ ಸಾಕ್ಷ್ಯಚಿತ್ರವನ್ನು ನಿರ್ಮಿಸಬೇಕು ಅಂತಿದ್ದೇನೆ.

ನನ್ನ ಮಾತೃಭಾಷೆ ಲಂಬಾಣಿ. ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಚೆನ್ನಾಗಿ ಮಾತಾಡೋಕೆ ಬರುತ್ತದೆ. ತೆಲುಗು, ತಮಿಳು, ಮಲಯಾಳ, ಫ್ರೆಂಚ್ ಸ್ವಲ್ಪ ಬಲ್ಲೆ. ಕೆಲವು ವರ್ಷ ಪ್ಯಾರಿಸ್, ಬೆಲ್ಜಿಯಂನಲ್ಲಿ ಕೆಲಸ ಮಾಡಿದ್ದೇನೆ

### ನೆಗೆಟಿವ್ ಕಾಮೆಂಟ್ಸ್ ಇಲ್ಲ

ಇಲ್ಲಿಯವರೆಗೂ ನನಗೆ ಹೆಚ್ಚು ನೆಗೆಟಿವ್ ಕಾಮೆಂಟ್ ಬಂದಿಲ್ಲ. ನಾನು ತಪ್ಪು ಪದ ಬಳಕೆ ಮಾಡಿದರೆ ಅಥವಾ ಯಾವುದೋ ಪ್ರದೇಶದ ಪದಗಳನ್ನು ತಪ್ಪಾಗಿ ಉಚ್ಚಾರ ಮಾಡಿದರೆ, ಅದನ್ನು ಸರಿಪಡಿಸುವ ಉದ್ದೇಶದಿಂದ, ತಪ್ಪು ತಿದ್ದಲು ಪ್ರತಿಕ್ರಿಯೆ ನೀಡುತ್ತಾರೆ. ಜನರು ನನಗೆ ಹೆಚ್ಚು ಪ್ರೋತ್ಸಾಹದಾಯಕರಾಗಿದ್ದಾರೆ.

(ಸೂಚನೆ: ಅನಿವಾರ್ಯ ಕಾರಣಗಳಿಂದ ಈ ವಾರ ಪ್ರಶ್ನಾಂಕಣ – ಪದಬಂಧ ಪ್ರಕಟವಾಗಿಲ್ಲ–ಸಂ)